ಉಪಾಧ್ಯಕ್ಷರು: ಈಗ ನಿಯಮ 69 ರ ಮೇಲೆ ಪ್ರಸ್ತಾಪ ಮಾಡಬೇಕಾಗಿರತಕ್ಕಂಥ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಅನುಮೋದನೆಗೆ ಸಂಬಂಧಪಟ್ಟ ಭಾಷಣವನ್ನು ನಾಳೆ ಬೆಳಿಗ್ಗೆ ಪ್ರಾರಂಭ ಮಾಡಿ. ಈಗ ವಿರೋಧಪಕ್ಷದ ನಾಯಕರು ನಿಯಮ 69 ರ ಮೇಲೆ ಪ್ರಸ್ತಾಪ ಮಾಡಬೇಕಾಗಿರತಕ್ಕಂಥ ವಿಷಯದ ಬಗ್ಗೆ ಮಾತನಾಡಲಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ನಾಳೆ ಬೆಳಿಗ್ಗೆ ನನಗೆ ಪ್ರಥಮ ಅವಕಾಶ ಕೊಡಬೇಕು. ಈಗ ನಿಯಮ 69 ರ ಮೇಲಿನ ವಿಷಯದ ಬಗ್ಗೆ ಚರ್ಚೆ ಆಗತಕ್ಕಂಥದ್ದು ಇವತ್ತು ಮಗಿದರೆ ಪರವಾಗಿಲ್ಲ. ಆದರೆ ನಾಳೆದಿವಸ ಇದೇ ವಿಷಯ ಮುಂದುವರೆದರೆ, ನಾನು ಈಗಾಗಲೇ ಹೇಳಿದಂತೆ ನನಗೆ ನಾಳೆದಿವಸ ಮೊದಲು ಅವಕಾಶ ಕೊಡಬೇಕು. ಯಾವುದೇ ಕಾರಣಕ್ಕೂ ರಾಜ್ಯಪಾಲರ ಭಾಷಣಕ್ಕೆ ಅನುಮೋದನೆ ಮಾಡದೆ ಮುಂದು ಹೋಗುವಂಥ ಪದ್ಧತಿ ಸರಿಯಲ್ಲ. ಆದ್ದರಿಂದ ಈ ರೀತಿಯಾದಂಥ ಸಂಪ್ರದಾಯವನ್ನು ತಾವು ಮೀರಬಾರದು. ಏಕೆಂದರೆ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯದ ಪ್ರಸ್ತಾವನೆಯು ಸಲುವಾಗಿ ಸನ್ಮಾನ್ಯ ವೈ.ಕೆ. ರಾಮಯ್ಯನವರು ಸೂಚಿಸಿ ಮಾತನಾಡಿದ್ದಾರೆ. ಆದ್ದರಿಂದ ಅದಕ್ಕೆ ಅನುಮೋದನೆ ಮಾಡಿ ನಾನು ಭಾಷಣ ಮಾಡಬೇಕಾಗಿರತಕ್ಕಂಥದ್ದು ನನ್ನ ಕರ್ತವ್ಯವಾಗಿದೆ. ಇದನ್ನು ಬಿಟ್ಟು ಹೊಸ ಸಂಪ್ರದಾಯಕ್ಕೆ ಪೀಠಿಕೆ ಹಾಕುವುದು ಸರಿಯಲ್ಲ.

ಉಪಾಧ್ಯಕ್ಷರು : ಹಿಂದೆ ಈಗಾಗಲೇ ತಾವು ಅನುಮೋದನೆ ಮಾಡಿದ್ದೀರಿ. ಆದ್ದರಿಂದ ನಾಳೆಯದಿವಸ ತಾವು ಮಾತನಾಡಿ.

ನಿಯಮ 69 ರ ಮೇರೆಗೆ

ವಿಷಯ : ವಿದ್ಯುತ್ ದರ ಏರಿಕೆಯಿಂದ ಜನ ಸಾಮಾನ್ಯರಿಗೆ ಉಂಟಾಗಿರುವ ತೊಂದರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ದರ ಏರಿಕೆಯು ಬಹಳ ಮಹತ್ವಪೂರ್ಣವಾದ ವಿಚಾರವಾಗಿರುವುದರಿಂದ ನಾವು ಇಲ್ಲಿ ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಅಧಿವೇಶನ ಪ್ರಾರಂಭವಾದ ಮೇಲೆ ರಾಜ್ಯದ ಜ್ವಲಂತ ಸಮಸ್ಯೆಗಳಾದ ರೈತನ ಸಂಕಷ್ಟಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ರಾಮಯ್ಯನವರು ಕೂಡ ಇದರ ಬಗ್ಗೆ ಬಹಳ ಒಳ್ಳೆಯ ವಿಚಾರಗಳನ್ನು ಹೇಳಿ ಸಾಕಷ್ಟು ಬೆಳಕು ಚೆಲ್ಲುವುದರ ಮೂಲಕ ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ವಿದ್ಯುತ್ ಏರಿಕೆ ಹಾಗೂ ವಿದ್ಯುತ್ ಪರಿಸ್ಥಿತಿಯ ಬಗ್ಗೆಯೂ ಕೂಡ ಸಾಕಷ್ಟು ಚರ್ಚೆ ಮಾಡಬೇಕಾಗುತ್ತದೆ. ಬಹುಶಃ ಈ ಮನೆಯ ಎಲ್ಲಾಸದಸ್ಯರು ಕೂಡ ಈ ಒಂದು ವಿಚಾರದಲ್ಲಿ ಭಾಗವಹಿಸಬಹುದು. ಮೊದಲನೇಯದಾಗಿ ವಿದ್ಯುತ್ ದರ ಏರಿಕೆ ಹಾಗೂ ಎರಡನೇಯದಾಗಿ ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ ಮೊನ್ನೆ ಬೆಂಕಿ ಕಾಣಿಸಿಕೊಂಡು ಸುಮಾರು 50 ಕೋಟಿ ನಷ್ಟವಾಗಿರುವ ಅಂದಾಜು ಇದೆ.

ಶ್ರೀ ಎಸ್. ಶಿವಣ್ಣ: ನಮ್ಮ ನಾಯಕರು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ವಿದ್ಯುತ್ ಮಂತ್ರಿಗಳು ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಇಲ್ಲ, ಹೀಗಿರುವಾಗ ಯಾರು ನಮಗೆ ಉತ್ತರ ಕೊಡುತ್ತಾರೆ? ನಾವು ಯಾರಿಗೆ ಹೇಳಬೇಕು ಎಂಬುದನ್ನು ತಾವೇ ಹೇಳಿ.

ಉಪಾಧ್ಯಕ್ಷರು: ನಾಳೆ ಚರ್ಚೆಯನ್ನು ಮುಂದುವರಿಸುತ್ತಾರಂತೆ ಈಗ ಸಧ್ಯಕ್ಕೆ ಪ್ರಾರಂಭ ಮಾಡಿದ್ದಾರಷ್ಟೆ, ಆದ್ದರಿಂದ ಅವರು ಪ್ರಾರಂಭಿಸಲಿ.

ಶ್ರೀ ಎ. ರಾಮದಾಸ್ : ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಇಲ್ಲ, ವಿದ್ಯುತ್ ಮಂತ್ರಿಗಳು ಇಲ್ಲವೆಂದರೆ ಹೇಗೆ? ಯಾರು ಇದನ್ನು ಗುರುತು ಮಾಡಿಕೊಳ್ಳುವುದು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಈಗಷ್ಟೇ ಪ್ರಾರಂಭಿಸಿದ್ದಾರೆ ನಾಳೆ ಮುಂದುವರಿಸುತ್ತಾರೆ.

ಶ್ರೀ ಶಿವಾಜಿ ಎಸ್. ನಾಡಗೌಡ : ಮೇಲ್ಮನೆಯಲ್ಲಿ ಕೂಡ ಇದೇ ವಿಷಯ ಪ್ರಸ್ತಾಪವಾಗುತ್ತಿರುವುದರಿಂದ ಅಲ್ಲಿ ಇದ್ದಾರೆ, ತಾವು ಈಗ ಪ್ರಾರಂಭಿಸಿ ಹೇಗೋ ನಾಳೆ ಮುಂದುವರಿಸಿದಾಗ ಅವರು ಇಲ್ಲಿ ಇರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ರಾಯಚೂರು ಥರ್ಮಲ್ ಪ್ಲಾಂಟಿನ 5 ನೇ ಯೂನಿಟ್‌ಗೆ ಬೆಂಕಿ ಬಿದ್ದಿದ್ದರಿಂದ ಸಂಪೂರ್ಣವಾಗಿ ಅದು ಬಂದ್ ಆಗಿದೆ. ನಮಗೆ ಇವತ್ತು ಸಾಕಷ್ಟು ವಿದ್ಯುತ್ತಿನ ಕೊರತೆ ಇದೆ. ಆರ್‌ಟಿ ಪಿ ಎಸ್ ಬಹಳ ಮಹತ್ವವಾದ ಪ್ಲಾಂಟ್ ಆಗಿದ್ದು ಇಡೀ ಉತ್ತರ ಕರ್ನಾಟಕದ ಭಾಗಗಳಿಗೆ ವಿದ್ಯುತ್ ಸರಬರಾಜು ಮಾಡತಕ್ಕಂಥ ಪ್ಲಾಂಟ್ ಆಗಿದೆ. ಇಲ್ಲಿ 5 ನೇ ಯೂನಿಟ್ ಬಂದ್ ಆಗಿರುವುದರಿಂದ ರಾಜ್ಯದ ಬಹುತೇಕ ಭಾಗದಲ್ಲಿ ಸಂಪೂರ್ಣವಾಗಿ ಕತ್ತಲಮಯವಾಗಿದೆ. ಇದಕ್ಕೆ ತಾಂತ್ರಿಕ ದೋಷವೆಂದು ಪತ್ರಿಕೆಗಳಲ್ಲಿ ಬರುತ್ತಿದೆ. ಆದರೆ, ಇದರ ಬಗ್ಗೆ ಏನಾಗಿದೆ? ಇದರ ಹಿನ್ನೆಲೆ ಏನು? ಎಂಬಿತ್ಯಾದಿ ಬಗ್ಗೆ ಕೂಲಂಕುಷವಾದ ತನಿಖೆಯಾಗಬೇಕಾಗುತ್ತದೆ. ಇದರಿಂದಾಗಿ ಸುಮಾರು 110 ಕೋಟಿ ರೂಪಾಯಿ ನಷ್ಟವಾಗಿದೆ ಎನ್ನುವಂಥ ಮಾತನ್ನು ನಾವಿಂದು ಕೇಳುತ್ತಿದ್ದೇವೆ. ಒಂದು ಕಡೆ ನಷ್ಟವಾದರೆ ಮತ್ತೊಂದು ಕಡೆ ಅಸಮರ್ಪಕ ವಿದ್ಯುತ್ ಸರಬರಾಜುವಾಗತಕ್ಕಂಥ ಪರಿಸ್ಥಿತಿಯ ಜೊತೆಗೆ ಕೈಗಾದಲ್ಲಿ ಕೂಡ ನಷ್ಟವಾಗಿದೆ ಎನ್ನುವ ಮಾತು ಕೇಳಿ ಬರುತ್ತಿದೆ. ಹೀಗಿರುವಾಗ ನಿರ್ವಹಣೆಯಲ್ಲಿ ಎಲ್ಲೋ ಒಂದು ಕಡೆ ದೋಷ, ತೊಂದರೆ ಇರುವುದನ್ನು ನಾವಿಂದು ನೋಡುತ್ತಿದ್ದೇವೆ. ಅಂಥ ಆಕಸ್ಮಿಕ ಘಟನೆ ನಡೆದಾಗ ಮಾನ್ಯ ಮುಖ್ಯಮಂತ್ರಿಗಳು ಸ್ಥಳಕ್ಕೆ ಭೇಟಿ ನೀಡಬೇಕಾಗಿತ್ತು. ಈ ರೀತಿ ಭೇಟಿ ನೀಡಿದ್ದರೆ ಅಲ್ಲಿರುವ ಅಧಿಕಾರಿಗಳಿಗಾಗಲೀ ಅಥವಾ ಅಲ್ಲಿನ ವ್ಯವಸ್ಥೆಗೆ ಒಂದು ಎಚ್ಚರಿಕೆಯನ್ನು ನೀಡಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಸ್ಥಳಕ್ಕೆ ಹೋಗಿ ಕೂಲಂಕುಷವಾದ ಪರಿಶೀಲನೆ ಮಾಡಬಹುದಾಗಿತ್ತು, ಆದರೆ ಅವರು ಈ ಕೆಲಸ ಮಾಡಲಿಲ್ಲ. ಇದರ ಜೊತೆಯಲ್ಲಿಯೇ ವಿದ್ಯುತ್ ದರ ಶೇಕಡ 17 ರಷ್ಟು ಏರಿಕೆ ಎಂದು ಅನೌನ್ಸ್ ಮಾಡಿದರು. ಆದರೆ ಇದನ್ನು ಲೆಕ್ಕಚಾರ ಮಾಡಿದಾಗ ಸುಮಾರು ಶೇಕಡ 37 ರಷ್ಟು, ಶೇಕಡ 75 ರಷ್ಟು ಏರಿಕೆಯಾಗದಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ರಾಜ್ಯ ಸರ್ಕಾರದವರು ದಿನಾಂಕ: 29- 12-00 ದಂದು ಏನು ಅನುಷ್ಠಾನ ಮಾಡಿ

ದರ ಏರಿಕೆಯನ್ನು ಮಾಡಿದ್ದರಿಂದ ಆ ಬಡವರು, ಜನಸಾಮಾನ್ಯರು, ಮಧ್ಯಮವರ್ಗದವರು, ಕೈಗಾರಿಕೋದ್ಯಮಿಗಳು, ಇತರೆ ಎಲ್ಲರಿಗೂ ಕೂಡ ಆ ವಿದ್ಯುತ್ ಬಿಲ್‌ನಿಂದ ಸಾಕಷ್ಟು ಶಾಖೆ ಹೊಡೆಯುತ್ತಿದೆ. ಇವತ್ತು ಹೇಳಿದ್ದು 17 ಪರ್ಸೆಂಟ್ ಎಂದರೆ ಅಲ್ಲಿ ಬಿಲ್ ಬರುತ್ತಿರುವುದೇ ಬೇರೆ ಇದೆ. ಆದ್ದರಿಂದ ಈ ವಿಷಯದ ಬಗ್ಗೆ ನಾನು ಸಂಪೂರ್ಣವಾಗಿ ನಾಳೆ ನನ್ನ ಚರ್ಚೆಯನ್ನು ಮುಂದುವರಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 4 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 14 ನೇ ಮಾರ್ಚ್ ಮಾಹೆ 2001 ರ ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು, ಕಾಸೂ. 148 - 350 ಪುಸ್ತಕಗಳು ದಿ: 09-10-2002